ಹೋಗಿತ್ತು. ಆಗ ಅದರೊಳಗಿಂದ ಜಿಲುಪಿದ ರಕುತ ಅಲ್ಲಿ ಅಷ್ಟಗಲಕ್ಕೂ ನೆಲದ ರಕುತದಂತೆ ಕಲೆಯಾಗಿ ಹೋಗಿತ್ತು. ನಂತರ ನಜ್ಜುಗುಜ್ಜಾಗಿದ್ದ ಜೀಪನ್ನು ಬಿಟ್ಟ ಹೆಬ್ಬಾವು ಒಮ್ಮೆಗೇ ಮತ್ತೆ ಬುಸುಗುಡುತ್ತಾ ಮೈಯ್ಯಂಥಾ ಮೈಯ್ಯನ್ನೆಲ್ಲಾ ಮುರಿಯುತ್ತಾ ಮುಖ ಮುಂದ್ಮಾಡಿಕೊಂಡು ಹಂಗೇ ಆ ರಕುತದೊಳಗೆ ಇಂಗಿ ಕಣ್ಮುಚ್ಚಿ ಕಣ್ಬಿಡೋದರೊಳಗೆ ಕಣ್ಮರೆಯಾಗಿ ಹೋಗಿತ್ತು.

ಹೊನ್ನಟ್ಟಾಲಯ್ಯ ಒಮ್ಮೆಗೇ ಅಯ್ಯಯ್ಯಪ್ಪೋ ಅಂತ ಕಿರುಚಿಕೊಂಡವನೇ ಎದ್ದು ಕೂತ. ಮೈಯ್ಯಂಥ ಮೈಯ್ಯೆಲ್ಲಾ ಬೆವರಿನಿಂದ ನೆಂದು ತೊಪ್ಪೆಯಾಗಿತ್ತು. ಎಷ್ಟು ಆಳ್ತದಲ್ಲಿಡಲು ನೋಡಿದರೂ ಎದೆ ಬಡುಕೊಳ್ಳುತ್ತಲೇ ಇತ್ತು. ಆಗಿನ್ನೂ ಅಬ್ಬಬ್ಬಾ ಅಂದರೆ ರಾತ್ರಿ ಮೂರರ ಸಮಯ. ಮತ್ತೆ ಮಲಗಲೂ ಆಗದೆ ಕೂರಲೂ ಆಗದೆ ಬೆಳಕರಿಯುವವರೆಗೂ ಕಾಯಲೂ ಆಗದೆ ಮುಗಿದೋಗಿದ್ದ ಬೀಡಿಕಟ್ಟನ್ನು ಜೇಬಿನಿಂದ ತೆಗೆದೆಸೆದು ಹಂಗೇ ತಡಕಾಡಿದವನಿಗೆ ಸಿಕ್ಕ ಒಂದೆರಡು ಬೀಡಿಯ ತುಂಡುಗಳಿಗೆ ಬೆಂಕಿ ಕಾಣಿಸಿ ಒಂದೇ ಉಸುರಿಗೆ ಪುಸುಪುಸನೆ ಸೇದಿದ. ಒಂಚೂರು ಗೆಲುವು ಸಿಕ್ಕುತ್ತಲೇ ಮೇಲೆದ್ದು ಮನೆಯ ಮುಂದಿನ ತೆಂಗಿನ ಮರದ ಬುಡಕ್ಕೆ ಉಚ್ಚೆ ಉಯ್ದು ಮತ್ತೆ ಬಂದು ಕೂತ.

‘ಅಲ್ಲಾ ಹೆಬ್ಬಾವು ಹರ್ದಾಡೋದೇ ದುಸ್ತರ ಅಂತದ್ರಾಗೆ ಬಾಲುದ್ದಗಂಟ ನಿಂತ್ಕಂತು ಅಂದ್ರೆ ಬಾಲ್ದಲ್ಲೇ ನಡ್ಕಂಡ್ ಬಂದು ಜೀಪಿನ್ನೊತ್ಗೆ ಅವ್ರುನ್ನೆಲ್ಲಾ ಸಾಯಾಕ್ತು ಅಂದ್ರೆ ನಂಬಾಕೇ ಆಗಲ್ಲ ಇದಾವ ಕೇಡಿಗೋ ಕಾಣೆನಲ್ಲಾ ಸಿವ ಸಿವ,’ ಅಂತ ಆತಂಕಕ್ಕೊಳಗಾದ. ಅಲ್ಲಿನ ಸಕಲವೂ ಮೌನದ ಸುಪರ್ದಿನಲ್ಲಿದ್ದ ಆ ಅವೇಳ್ಯದಲ್ಲಿ ಇದ್ದಕ್ಕಿದ್ದಂತೆ ಹಕ್ಕಿಯೊಂದು ಕೂಗಾಕತೊಡಗಿತು. ಅದು ಮನುಷ್ಯರ ಸುಳಿವು ಸಿಕ್ಕ ಕೂಡಲೇ ಕೂಗುವ ಹಕ್ಕಿಯೆಂದು ಬೇಟೆಯಾಡಲು ಹೋಗುವ ಹೊತ್ತಲ್ಲಿ ತಿಳುಕಂಡಿದ್ದ ಹೊನ್ನಟ್ಟಾಲಯ್ಯ ಮೈಯ್ಯೆಲ್ಲಾ ಕಣ್ಣಾದ. ಮತ್ಮತ್ತೆ ಹಾಳು ಕನಸು ಅವನನ್ನಿಡಿದು ಜಪ್ಪತೊಡಗಿತು. ಮತ್ತೊಮ್ಮೆ ಭಯಾಧೀನನಾದರೂ ಸುಮ್ಮನೆ ಕೂರಲಾಗದೆ ಮೇಲೆದ್ದ ಹೊನ್ನಟ್ಟಾಲಯ್ಯ ನಿಂತಲ್ಲೇ ಸುತ್ತ ಕಣ್ಣಾಡಿಸಿದ. ಆ ವೇಳೆಗೆ ಹಕ್ಕಿಯ ಕೂಗು ನಿಂತಿತ್ತು. ಹೆಂಗೂ ಅಡವಪ್ಪ ಗಂಗವ್ವನ ಮನೇಲಿದಾನೆ ಅಂತ ತಿಳ್ಕಂಡು ಮನೆ ನುಗ್ಗಾಕೆ ಬಂದಿರೋ ಇಲ್ಲಾ ತೆಂಗಿನ ಕಾಯಿ ಕದಿಯೋಕೆ ಬಂದಿರೋ ಕಳ್ಳರಿರಬಹುದಾ ಅಂದುಕೊಂಡು ಮೆಲ್ಲಗೆ ಮನೆಯ ಮುಡುಕಿನವರೆಗೂ ನಡೆದು ಇಣುಕಿದ. ಅಲ್ಲಿ ಆಕೃತಿಯೊಂದು ಬರಬರನೆ ನಡೆದೋಗುತ್ತಿತ್ತು. ಹೊನ್ನಟ್ಟಾಲಯ್ಯನಿಗೆ ಯಾರೂಂತ ನೋಡುವ ಮನಸಾಯ್ತು. ಯಾರೂ ಅಂತ ಕೂಗಲೂ ಬಾಯ್ದೆರೆದ. ಆದರೆ, ಕೂಗಲು ಭಯವಾಯ್ತು. ಅಕಸ್ಮಾತ್ ಅವನು ಕಳ್ಳರ ಗುಂಪಿನವನಾಗಿದ್ದರೆ ಮಿಕ್ಕವರು ಅಲ್ಲೇ ಎಲ್ಲೋ ಕದ್ದು ಕೂತಿದ್ದರೆ ನಾನೊಬ್ಬ ಅವರಿಗೆ ಯಾವ ಲೆಕ್ಕ ಮಾತ್ರವಲ್ಲ ತನ್ನನ್ನೇ ಮುಗಿಸಿಬಿಟ್ಟರೆ ಅಂತ ಯೋಚಿಸುತ್ತಿದ್ದವನಿಗೆ ಕೆಲ ಹೊತ್ತಿನ ಹಿಂದೆ ಬಿದ್ದ ಕನಸು ಅದರೊಳಗಿನ ಮೂಗುತ್ತ ಮತ್ತೆ ನೆನಪಾಗಿ ಜಗಲಿಗೆ ನಡೆದು ಅಯ್ಯೋ ಇವತ್ತ ಯಾಕಾರಾ ಇತ್ಲಾಗಿ ಬಂದ್ನೋ ಅಂತ ಅಂದುಕೊಂಡು ಮತ್ತೆ ಮೈತುಂಬಾ ರಗ್ಗೊದ್ದು ಉಲ್ಡಿಕೊಂಡ.

ಹಂಗೆ ಹೊನ್ನಟ್ಟಾಲಯ್ಯನಿಗೆ ಅನುಮಾನ ಬರುವಂತೆ ನಡೆದು ಹೋದ ಆಕೃತಿ ಮುಬೀನಾಳ ಅಪ್ಪ ಖಾಸಿಂ ಸಾಬರದಾಗಿತ್ತು. ಖಾಸಿಂ ಸಾಬರು ತನಗೇನೇ ಕಷ್ಟ ಬಂದರೂ ಎಂಥದೇ ಸಮಸ್ಯೆಗೆ ಸಿಕ್ಕಿಕೊಂಡರೂ ಎಲ್ಲದಕ್ಕೂ ಅಡವಪ್ಪನನ್ನು ಎಡತಾಕಿತ್ತಿದ್ದರು. ಅಡವಪ್ಪ ಹೇಳಿದ ಮಾತಿಗೆ ದೂಸ್ರಾ ಮಾತಾಡುತ್ತಿರಲಿಲ್ಲ. ಹಂಗೆ ನೋಡಿದ್ರೆ ಮಗಳು ಮುಬೀನಾಳನ್ನು ಕಾಲೇಜಿಗೆ ಕಳಿಸುವುದೋ ಬೇಡವೋ ಅನ್ನುವ ಗೊಂದಲದಲ್ಲಿದ್ದ ಖಾಸಿಂ ಸಾಬರನ್ನು ಕಳಿಸಲು ಒಪ್ಪಿಸಿದ್ದೇ ಅಡವಪ್ಪ. ಸಂಜೆಯಿಂದ ಮಗಳು ಮನೆಗೆ ಬಾರದ್ದರಿಂದ ಕಂಡಕಂಡವರನ್ನೆಲ್ಲಾ ಕೇಳಿ ಎಲ್ಲಾ ಕಡೆ ರಾಪಾಡಿ ಎಲ್ಲೂ ಕಾಣದೇ ಹೋಗಿದ್ದರಿಂದ ಭೂಮಿಗಿಳಿದು ಹೋಗಿದ್ದರು. ಆವತ್ತೊಂದು ದಿನ ಹುಡುಸ್ಲೇಗೌಡನ ಮಗ ವೀರಭದ್ರನ ಗ್ಯಾಂಗು ಅಂದಿದ್ದ ಮಾತುಗಳು ಮತ್ಮತ್ತೆ ನೆನಪಾಗುತ್ತಾ ಖಾಸಿಂ ಸಾಬರನ್ನು